ದಿನಾಂಕಃ 24.02.2026 ರಂದು ಡಿ.ಡಬ್ಲ್ಯೂ-5 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ವಾದಿ ನನ್ನ ತಮ್ಮ. ನಮ್ಮ ಕುಟುಂಬದ ಸ್ವತ್ತುಗಳ ಸಂಬಂಧಿಸಿದಂತೆ ವಿಭಾಗವಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ತಾಯಿಗೆ 7 ಎಕರೆ ಜಮೀನು ಬಿಟ್ಟಿರುತ್ತೇವೆ. ಅದನ್ನು ವಾದಿ ಒಬ್ಬರೇ ಅನುಭವಿಸುತ್ತಿರುತ್ತಾರೆ. ಸದರಿ 7 ಎಕರೆ ಪೈಕಿ 2 ಎಕರೆ ಈ ದಾವೆಯ ದಾವಾ ಸ್ವತ್ತಾಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತನ್ನು ನನ್ನ ತಂದೆ ತಾಯಿಗೆ ಬಿಟ್ಟು ಎಷ್ಟು ವರ್ಷಗಳಾಗಿರುತ್ತದೆ ಎಂದರೆ ಹಿಸ್ಸೆ ಆದಾಗ ನೀಡಿರುತ್ತೇವೆ. ನನ್ನ ತಂದೆ ತಾಯಿ ಬದುಕಿದ್ದಾಗ ವಾದಿ ದಾವಾ ಸ್ವತ್ತಿನಲ್ಲಿ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಬದುಕಿದ್ದಾಗ ಅವರೇ ಮಾಡುತ್ತಿದ್ದರು. ನನ್ನ ತಂದೆ ಮರಣಹೊಂದಿ 35 ವರ್ಷ ಆಗಿರುತ್ತದೆ. ನನ್ನ ತಾಯಿ 2018 ರಲ್ಲಿ ಮರಣಹೊಂದಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಸೇರಿದ ಜಮೀನಿನಲ್ಲಿ ವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ 2 ಎಕರೆ ವಿಲ್ ಮಾಡಿರುತ್ತಾರೆ ಮತ್ತು ಉಳಿದ ಇತರೆ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಮತ್ತು ಉಳಿದ ಸ್ವತ್ತುಗಳಲ್ಲಿ ವಾದಿ ಸ್ವಾಧೀನದಲ್ಲಿರುತ್ತಾರೆ.

2. ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ನನ್ನ ಜಮೀನು ಇದೆ ಎಂದರೆ ಮೊದಲು ಇತ್ತು ಈಗ ವಜಾ ಆಗಿರುತ್ತದೆ. ಸದರಿ ಸ್ವತ್ತು ಹಿಸ್ಸೆ ಮುಖಾಂತರ ನನಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಹಿಸ್ಸೆಯ ಮೇಲೆ ಸಣ್ಣಯ್ಯರವರು ದಾವೆ ಸಲ್ಲಿಸಿ ಅವರೇ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಹಿಸ್ಸೆ ಸಣ್ಣಯ್ಯರವರಿಗೆ ಹೋದ ಕಾರಣ ದಾವಾ ಸ್ವತ್ತನ್ನು ನನ್ನ ಹಿಸ್ಸೆಗೆ ನೀಡುವಂತೆ ವಾದಿಗೆ ಕೇಳಿರುತ್ತೇನೆ ಎಂದರೆ ದಾವಾ ಸ್ವತ್ತನ್ನು ಕೇಳಿರುವುದಿಲ್ಲ ಆದರೆ ಬೇರೆ 1 ಎಕರೆ ನೀಡುವಂತೆ ಕೇಳಿರುತ್ತೇನೆ. ಆಗ ವಾದಿ ಒಪ್ಪಿರುವುದಿಲ್ಲ ಎಂದರೆ ಸರಿ. ಆದ ಕಾರಣ ನಮ್ಮ ನಡುವೆ ಮಾತುಕತೆ ಇರುವುದಿಲ್ಲ ಎಂದರೆ ಸರಿಯಲ್ಲ ಚೆನ್ನಾಗಿ ಇರುತ್ತೇವೆ.

3. ಈರಮ್ಮರವರು 1ನೇ ಪ್ರತಿವಾದಿಯ ಮನೆಯಲ್ಲಿ ಮರಣಹೊಂದಿರುತ್ತಾರ ಎಂದರೆ ಹೌದು. 1ನೇ ಪ್ರತಿವಾದಿಯ ಮನೆಯಿಂದಲೇ ಮೃತದೇಹವನ್ನು ತಂದಿರುತ್ತೇನೆ. ಸದರಿ ವಿಚಾರವನ್ನು ತಾಲ್ಲೂಕು ಕಛೇರಿಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಅವರೇ ಸ್ಥಳಕ್ಕೆ ಬಂದು ಮಾಹಿತಿ ಪಡೆದುಕೊಂಡಿರುತ್ತಾರೆ. ಅದೇ ಸ್ಥಳದಲ್ಲಿ ಮರಣಹೊಂದಿರುತ್ತಾರೆ ಎಂದು ಮರಣ ಪ್ರಮಾಣ ಪತ್ರ ನೀಡಿರುತ್ತಾರಾ ಎಂದರೆ ಹೌದು. ಮಲಗಳಲೆಯಲ್ಲಿ ಮರಣಹೊಂದಿರುವುದಾಗಿ ಪ್ರಮಾಣ ಪತ್ರ ನೀಡಿರುತ್ತಾರೆ.

4. ದಿ. 17.10.2001 ರಂದು ನನ್ನ ತಂದೆ ತಾಯಿ ಅವರ ಜೀವನಾಂಶಕ್ಕಾಗಿ ಬಿಟ್ಟ ಸ್ವತ್ತಿನ ಪೈಕಿ ಮಲಗಳಲೆ ಗ್ರಾಮದ ಸರ್ವೆ ನಂಬರ್ 38 ರಲ್ಲಿ 2 ಎಕರೆ ಮತ್ತು 108 ರಲ್ಲಿ 1 ಎಕರೆ, ಸರ್ವೆ ನಂಬರ್ 63 ರಲ್ಲಿ 1 ಎಕರೆ 19 ಗುಂಟೆ ಯನ್ನು ಈರಮ್ಮರವರು ವಾದಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಸರಿಯಾಗಿ ಗೊತ್ತಿರುವುದಿಲ್ಲ. ಸದರಿ ಸ್ವತ್ತುಗಳು ನಮ್ಮ ಕುಟುಂಬದ ಸ್ವತ್ತುಗಳು ಎಂದರೆ ಸರಿ.

5. ಈರಮ್ಮರವರು ನಮ್ಮ ಮನೆಗೆ ಬಂದು ಇದ್ದರಾ ಎಂದರೆ ಮೊದಲು ನಮ್ಮ ಮನೆಯಲ್ಲಿದ್ದರು ಇಸವಿ ಗೊತ್ತಿರುವುದಿಲ್ಲ. ಈರಮ್ಮರವರು 1ನೇ ಪ್ರತಿವಾದಿಗೆ ವಿಲ್ ಮಾಡುವ ವಿಚಾರವನ್ನು ನನಗೆ ತಿಳಿಸಿರುತ್ತಾರಾ ಎಂದರೆ ಹೌದು. ಯಾವಾಗ ತಿಳಿಸಿರುತ್ತಾರೆ ಎಂದರೆ 2008 ರಲ್ಲಿ ವಿಲ್ ಮಾಡಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ. ಯಾವ ಸ್ವತ್ತಿಗೆ ಸಂಬಂಧಪಟ್ಟಂತೆ ವಿಲ್ ಮಾಡುವುದಾಗಿ ತಿಳಿಸಿರುತ್ತಾರೆ ಎಂದರೆ ಮಲಗಳಲೆ ಗ್ರಾಮದ ಸರ್ವೆ ನಂ. 63 ರ 2 ಎಕರೆ. 2008 ರಲ್ಲಿ ಮಾಡಿರುವ ವಿಲ್ ನ್ನು ರದ್ದುಮಾಡಿಸಿಕೊಂಡು ವಾದಿಗೆ ಮತ್ತೊಂದು ವಿಲ್ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಯಾವ ಇಸವಿಯಲ್ಲಿ ಈರಮ್ಮರವರು 1ನೇ ಪ್ರತಿವಾದಿ ಮನೆಯಲ್ಲಿದ್ದರು ಎಂದರೆ 5-6 ವರ್ಷ ಇದ್ದರು. ಈರಮ್ಮರವರ ಗುರುತಿನ ಚೀಟಿ, ಆಧಾರ್ ಕಾರ್ಡ್, ಪಡಿತರ ಚೀಟಿ ಎಲ್ಲವೂ 1ನೇ ಪ್ರತಿವಾದಿಯ ವಿಳಾಸದಲ್ಲಿ ಇದೆಯೇ ಎಂದರೆ ಗೊತ್ತಿಲ್ಲ.

6. ಈರಮ್ಮ ರವರು ಕಾರ್ಪೊರೇಶನ್ ಬ್ಯಾಂಕ್ ಕೆ. ಹೊಸಕೋಟೆ ಯಲ್ಲಿ ಖಾತೆ ಹೊಂದಿರುತ್ತಾರೆ ಎಂದರೆ ಸರಿ. ಸದರಿ ಹಣವನ್ನು ವಾದಿ ತೆಗೆದುಕೊಳ್ಳಬಹುದು ಎಂದು ನಾವೆಲ್ಲರೂ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಬ್ಯಾಂಕ್ ಗೆ ಹೋಗಿ ನಾವೆಲ್ಲರೂ ನಮ್ಮ ಗುರುತಿನ ಚೀಟಿಗಳನ್ನು ನೀಡಿ ಒಪ್ಪಿಗೆ ಪತ್ರವನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾನು 7ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಈರಮ್ಮರವರ ಹೆಸರಿದೆ ಎಂದರೆ ಸರಿ. ಸದರಿ ದಾಖಲಾತಿಯನ್ನು ನಿಪಿ-11 ಎಂದು ಗುರ್ತಿಸಲಾಯಿತು. ನಿಪಿ-11 ರಲ್ಲಿ ವಾದಿ ಮತ್ತು ಅವರ ಹೆಂಡತಿ ಇದ್ದಾರ ಎಂದರೆ ಸರಿ. ಹೆಂಡತಿ ಮಕ್ಕಳು ಇರುತ್ತಾರಾ ಎಂದರೆ ಸರಿ.

7.1ನೇ ಪ್ರತಿವಾದಿ ಈರಮ್ಮರವರು ವಿಲ್ ಮಾಡಿರುವುದಿಲ್ಲ, 1ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಈರಮ್ಮರವರು ಯಾವತ್ತಿಗೂ ಪ್ರತಿವಾದಿಯ ಮನೆಯಲ್ಲಿರಲಿಲ್ಲ, ವಾದಿ ಮನೆಯಲ್ಲಿದ್ದರು ಎಂದರೆ ಸರಿ. ವಾದಿಯ ಮನೆಯಲ್ಲೇ ಮರಣಹೊಂದಿರುವ ಬಗ್ಗೆ ಪ್ರಮಾಣ ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಈರಮ್ಮರವರ ಅಂತ್ಯ ಸಂಸ್ಕಾರವನ್ನು ವಾದಿ ಹಿಸ್ಸೆಯ ಜಮೀನಿನಲ್ಲಿ ಮಾಡಿರುತ್ತೇವೆ ಎಂದರೆ ಸರಿ. ಈರಮ್ಮರವರ ಆರಾಧನಾ ಕಾರ್ಯಕ್ರಮವನ್ನು ಸಹ ವಾದಿಯ ಮನೆಯಲ್ಲಿ ಮಾಡಿರುತ್ತೇವೆ ಎಂದರೆ ಸರಿ. ವಾದಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಈರಮ್ಮರವರ ಆರಾಧನಾ ಪತ್ರ ಎಂದರೆ ಸರಿ. ಈರಮ್ಮರವರ ಆರಾಧನಾ ಕಾರ್ಯಕ್ರಮವನ್ನು ವಾದಿಯೇ ಮಾಡಿರುತ್ತಾರೆ ಎಂದರೆ ಎಲ್ಲರೂ ಸೇರಿ ಮಾಡಿರುತ್ತೇವೆ. ಅದರ ಸಂಪೂರ್ಣ ವೆಚ್ಚವನ್ನು ವಾದಿಯೇ ಭರಿಸಿರುತ್ತಾರೆ ಎಂದರೆ ಈರಮ್ಮರವರ ಖಾತೆಯಲ್ಲಿದ್ದ ಹಣವನ್ನು ವಾದಿಯೇ ಪಡೆದುಕೊಂಡಿರುತ್ತಾರೆ ಅವರೇ ಮಾಡಿರುತ್ತಾರೆ. ಸದರಿ ಖಾತೆಗೆ ವಾದಿಯನ್ನು ವಾರಸುದಾರರನ್ನಾಗಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಹಣವನ್ನು ಪಡೆದುಕೊಳ್ಳುವಾಗ ನಾವೆಲ್ಲರೂ ತಕರಾರು ಮಾಡಿರುವುದಿಲ್ಲ ಎಂದರೆ ಸರಿ.

ಈರಮ್ಮರವರು ವಾದಿಯ ಮನೆಯಲ್ಲೇ ಮರಣಹೊಂದಿರುವ ಕಾರಣ ಅವರ ಜಮೀನಿನಲ್ಲೇ ಅಂತ್ಯಸಂಸಾಕರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ನಡುವೆ ವೈಮನಸ್ಸು ಇರುವ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿರುವ ಕೆರೆ ದಾವಾ ಸ್ವತ್ತಿನಲ್ಲಿದೆ ಎಂದರೆ ಗೊತ್ತಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.